**ಕರ್ನಾಟಕ ಸರ್ಕಾರ**

**ಕೃಷಿ ಮಾರಾಟ ಇಲಾಖೆ**

ಸಂ:ಕೃಮಾಇ/ನಿಯವಿ/ಇತರ/78/2018-19

ಕೃಷಿ ಮಾರಾಟ ನಿರ್ದೇಶಕರ ಕಛೇರಿ,
ನಂ.16, 2ನೇ ರಾಜಭವನ ರಸ್ತೆ,
ಬೆಂಗಳೂರು, ದಿ: 25/08/2018

:: **ಸುತ್ತೋಲೆ** ::

**ವಿಷಯ**:- ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ನಿಯಂತ್ರಣ ಮತ್ತು ಅಭಿವೃದ್ಧಿ) ಅಧಿನಿಯಮ 1966ರ ಪ್ರಕಾರ ದಕ್ಷ ಆಡಳಿತ ನೀಡುವ ಕುರಿತು.

**ಉಲ್ಲೇಖ**:- 1. ಈ ಕಛೇರಿ ಸುತ್ತೋಲೆ ಸಂ:ಕೃಮಾಇ/347/ನಿಯವಿ/19-10, ದಿ:05/10/2009
2. ಈ ಕಛೇರಿ ಸುತ್ತೋಲೆ ಸಂ:ಕೃಮಾಇ/98/ನಿಯವಿ/2010, ದಿ:03/06/2010.

- - - -

ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ನಿಯಂತ್ರಣ ಮತ್ತು ಅಭಿವೃದ್ಧಿ) ಅಧಿನಿಯಮ 1966 ಮತ್ತು ನಿಯಮಾವಳಿ 1968 ಹಾಗೂ ಉಪನಿಯಮಗಳಲ್ಲಿ ರೂಪಿಸಿರುವ ಕಲಂಗಳಿಗೆ ಸಂಬಂಧಿಸಿದಂತೆ ರೈತಾಪಿ ವರ್ಗವನ್ನು ಶೋಷಣೆಯಿಂದ ಮುಕ್ತಗೊಳಿಸಲು ಬಿಳಿ ಚೀಟಿ ನೀಡದಂತೆ, ರೈತರಿಂದ ಕಮೀಷನ್ ಪಡೆಯದಂತೆ ತಡೆಯುವುದು, ಅಧಿಕೃತ ಲೆಕ್ಕ ತೀರುವಳಿ ಪಟ್ಟಿ ನೀಡುವಂತೆ ಪೇಟೆ ಕಾರ್ಯಕರ್ತರುಗಳಿಗೆ ತಿಳಿಯಪಡಿಸುವುದು, ನಿಯಂತ್ರಣಾತ್ಮಕ ಚಟುವಟಿಕೆಗಳನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಿ ಮಾರುಕಟ್ಟೆ ಪ್ರಾಂಗಣ ಮತ್ತು ಕ್ಷೇತ್ರಗಳಲ್ಲಿ ಅನಧಿಕೃತ ವಹಿವಾಟು ನಡೆಯದಂತೆ ಕಾರ್ಯಾಚರಣೆ ಕೈಗೊಳ್ಳುವುದು ಮತ್ತು ಮಾರುಕಟ್ಟೆ ಶುಲ್ಕ, ದಂಡವನ್ನು ನಿಗದಿತ ಅವಧಿಯೊಳಗೆ ಪಾವತಿ ಆಗಿರುವುದನ್ನು ಗಮನವಿಟ್ಟು ಪರಿಶೀಲಿಸಿ, ಮಾರುಕಟ್ಟೆ ಸಮಿತಿಗೆ ಯಾವುದೇ ನಷ್ಟ ಉಂಟಾಗದಂತೆ ಕ್ರಮವಿಡುವಂತೆ ಈಗಾಗಲೇ ಸುತ್ತೋಲೆ, ಸೂಚನೆಗಳನ್ನು ನೀಡಲಾಗಿರುತ್ತದೆ.

ಮೇಲ್ಕಂಡ ಸುತ್ತೋಲೆ ಸೂಚನೆಗಳನ್ವಯ ಮಾರುಕಟ್ಟೆ ಪ್ರಾಂಗಣದಲ್ಲಿ ರೈತರು ತಮ್ಮ ಕೃಷಿ ಉತ್ಪನ್ನಗಳನ್ನು ಮಾರಾಟಕ್ಕೆ ತಂದಾಗ ಅವರುಗಳಿಗೆ ಯಾವುದೇ ಶೋಷಣೆಗಳು ಆಗದಂತೆ ಕ್ರಮವಿಡುವುದು ಸಮಿತಿಯ ಕರ್ತವ್ಯವಾಗಿರುತ್ತದೆ. ಆದರೆ ರೈತರಿಗೆ ಕೆಲವೊಂದು ಸಮಿತಿಗಳಲ್ಲಿ ಪೇಟೆಕಾರ್ಯಕರ್ತರು ಅಧಿಕೃತ ಲೆಕ್ಕ ತೀರುವಳಿ ಪಟ್ಟಿ ನೀಡದೆ ಬಿಳಿಚೀಟಿ ನೀಡುತ್ತಿರುವ ಬಗ್ಗೆ ಹಾಗೂ ರೈತರಿಂದ ದಲ್ಲಾಳಿಗಳು ಹಣ್ಣು ಮತ್ತು ತರಕಾರಿ ಉತ್ಪನ್ನಗಳ ಮೇಲೆ ಕಮೀಷನ್ ವಸೂಲಿ ಮಾಡುತ್ತಿರುವ ಕುರಿತು ಅನೇಕ ದೂರುಗಳು ಬಂದಿರುತ್ತವೆ. ಅಲ್ಲದೆ ಜಿಲ್ಲಾ ಮಟ್ಟದ ಅಧಿಕಾರಿಗಳು ಮತ್ತು ಕಾನೂನುಜಾರಿಕೋಶದ ಅಧಿಕಾರಿ/ಸಿಬ್ಬಂದಿಗಳು ಮಾರುಕಟ್ಟೆ ಕ್ಷೇತ್ರದಲ್ಲಿ ಪ್ರವಾಸ ಕೈಗೊಂಡ ಸಂದರ್ಭದಲ್ಲಿ ಅಥವಾ ಅನಿರೀಕ್ಷಿತವಾಗಿ ಭೇಟಿ ನೀಡಿದ ಸಂದರ್ಭದಲ್ಲಿ ದಲ್ಲಾಳಿಗಳು ರೈತರಿಂದ ಕಮೀಷನ್ ಪಡೆಯುತ್ತಿರುವುದು, ಬಿಳಿ ಚೀಟಿ ನೀಡುತ್ತಿರುವುದರ ಕುರಿತು ಅಗತ್ಯ ಕ್ರಮ ಕೈಗೊಳ್ಳದಿರುವುದನ್ನು ಗಮನಿಸಲಾಗಿದೆ.

ನಿಯಂತ್ರಣಾತ್ಮಕ ಕ್ರಮಗಳನ್ನು ಕೈಗೊಳ್ಳುವ ಮೂಲಕ ರೈತ ಬೆಳೆಗಾರರಿಗೆ ಹಣ ಪಾವತಿ, ಸರಿಯಾದ ತೂಕ, ರೈತರಿಂದ ಕಮೀಷನ್ ವಸೂಲಿ ಮಾಡುತ್ತಿರುವವರ ವಿರುದ್ಧ ಕಾಯ್ದೆ ಕಲಂ 73(2)(ಬಿ) ಮೇರೆಗೆ ಸದರಿ ಅಂಗಡಿಗಳ ಕಮೀಷನ್ ಏಜೆಂಟ್ ಲೈಸೆನ್ಸ್‌ನ್ನು ಅಮಾನತ್ತುಗೊಳಿಸುವುದು, ಸ್ಪರ್ಧಾತ್ಮಕ ಧಾರಣೆ ಒದಗಿಸಿಕೊಡುವುದು ಹಾಗೂ ಕಾನೂನು ಜಾರಿಕೋಶದ ಅಧಿಕಾರಿಗಳು ಮತ್ತು ಜಿಲ್ಲಾ ಉಪ/ಸಹಾಯಕ ನಿರ್ದೇಶಕರುಗಳು ಬದ್ಧತೆಯಿಂದ ಕಾರ್ಯನಿರ್ವಹಿಸುವುದು ಅಗತ್ಯವಿದ್ದು ಈ ಬಗ್ಗೆ ಎಲ್ಲಾ ಕ್ರಮಗಳನ್ನು ಕೈಗೊಳ್ಳಲು ಹಾಗೂ ಸಂಬಂಧಿಸಿದಂತೆ ಮಾಹಿತಿಯನ್ನು ಕೇಂದ್ರ ಕಛೇರಿಗೆ ನೀಡಲು ತಿಳಿಸಲಾಗಿದೆ. ವಿಭಾಗೀಯ ಮಟ್ಟದ ಪ್ರಗತಿ ಪರಿಶೀಲನಾ ಸಭೆಯಲ್ಲಿ ಸುತ್ತೋಲೆ ನಿರ್ದೇಶನಗಳನ್ನು ಜಾರಿಗೆ ತಂದಿರುವ ವಿವರಗಳನ್ನು ಪರಿಶೀಲಿಸಲಾಗುವುದು. ಸುತ್ತೋಲೆ ಸೂಚನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸದೆ ಇರುವ ಅಧಿಕಾರಿಗಳ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲಾಗುವುದೆಂದು ಈ ಮೂಲಕ ತಿಳಿಸಲಾಗಿದೆ.

21/08/10

(ಎಂ.ಬಿ.ರಾಜೇಶ್ ಗೌಡ)

ನಿರ್ದೇಶಕರು

ಇವರಿಗೆ:-

1. ರಾಜ್ಯದ ಎಲ್ಲಾ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳ ಅಧ್ಯಕ್ಷರು/ಕಾರ್ಯದರ್ಶಿಗಳಿಗೆ.
2. ಹೆಚ್ಚುವರಿ ನಿರ್ದೇಶಕರು (ಕಾನೂನು ಜಾರಿಕೋಶ), ಕೃಷಿ ಮಾರಾಟ ಇಲಾಖೆ, ಕೇಂದ್ರ ಕಛೇರಿ, ಬೆಂಗಳೂರು.
3. ಜಂಟಿ ನಿರ್ದೇಶಕರು(ಕಾನೂನು ಜಾರಿಕೋಶ), ಕೃಷಿ ಮಾರಾಟ ಇಲಾಖೆ, ದಕ್ಷಿಣ ವಲಯ, ಬೆಂಗಳೂರು, ಉತ್ತರ ವಲಯ, ಹುಬ್ಬಳ್ಳಿ.
4. ಜಿಲ್ಲಾ ಉಪ/ಸಹಾಯಕ ನಿರ್ದೇಶಕರುಗಳಿಗೆ.
5. ಕೇಂದ್ರ ಕಛೇರಿಯ ಶಾಖಾಧಿಕಾರಿಗಳಿಗೆ.